SRI C. M. ARUMUGHAM.—Sir, though I am a member of the Business Advisory Committee, I have to raise this point. Whatever it is, you have permitted a discussion on the point raised by Sri Vodeyaraj. That means, what we have decided in the Business Advisory Committee we are not following. I have given two Call Attention Notices and they are pending. Notice has been given by an hon'ble Member under Rule 312. My submission is that the Speaker may allow a full day to discuss matters under Rule 312.

MR. SPEAKER.—One by one I will take them up.

SRI B.V. KAKKILAYA.—You have already indicated that you wil permit raising two or three issues and we will stik to that. We want you to permit us to raise those issues which you have already permitted.

ಅಧ್ಯಕ್ಷರು:— ಮಂಗಳೂರಿನ ನೆರೆ ವಿಚಾರಕ್ಕೆ ಸನ್ಮಾನ್ಯರುಗಳಾದ ಫರೀದ್, ಕಕ್ಕಿಲಾಯ ಮತ್ತು ಮೊಹಿದ್ದೀನವರು ಸಹಿ ಮಾಡಿರುವುದರಿಂದ ಅವರುಗಳ ಪೈಕಿ ಯಾರಾದರೂ ಒಬ್ಬರು ಅವರಲ್ಲೇ ತೀರ್ಮಾನ ಮಾಡಿಕೊಂಡು ಮಾತನಾಡಿದರೆ ಸಾಕು.

ಶ್ರೀ ಪಿ.ಕೆ. ಕಳ್ಳೀಗುಡ್ಡ—ನಾನು ರೂಲ್ ೩೧೨ರ ಕೆಳಗೆ ಒಂದು ನೋಟೀಸನ್ನು ಕಳುಹಿಸಿದ್ದೇನೆ. ಆ ವಿಚಾರ ಪತ್ರಿಕೆಗಳ ಮುಖ್ಯಪುಟದಲ್ಲೇ ಬಂದಿದೆ. ಅದು ಬರುತ್ತದೆ, ಬರುತ್ತದೆ ಎಂದು ನಾನು ಪ್ರತಿ ದಿನ ೧೨ ಗಂಟೆ ವರೆಗೆ ಕುಳಿತು ಕುಳಿತು ಹೋಗುತ್ತಿದ್ದೇನೆ.

ಅಧ್ಯಕ್ಷರು—ಮಾನ್ಯ ಸದಸ್ಯರು ಈ ರೀತಿ ಪದೇ ಪದೇ ಎದ್ದು ಮಾತನಾಡುವುದು ಸರಿಯಲ್ಲ. Is it the opinion of the Government to take up this matter under rule 312 now ?

SRI B. BASAVALINGAPPA.—We will take care of that.

Flood have in Nethravati river in S.K. District

† ಶ್ರೀ ಯು.ಟಿ. ಫರೀದ್ (ಉಲ್ಲಾಳ)—ಮಾನ್ಯ ಅಧ್ಯಕ್ಷರೇ, ೧೯೭೪ರಲ್ಲಿ ನಮ್ಮ ಸೌತ್ ಕೆನರಾ ದಲ್ಲಿ ಒಂದು ನೆರೆ ಬಂತು. ಆಗ ಸರ್ಕಾರದವರು ಬೇಕಾದ ಸಹಾಯವನ್ನು ಮಾಡಿದ್ದಾರೆ. ಅಂಥ ಒಂದು ನೆರೆ ಕಳೆದ ೨–೩ ದಿನಗಳಿಂದ ನಮ್ಮ ಸೌತ್ ಕೆನರಾದಲ್ಲಿ ಸುತ್ತ ಮುತ್ತ ಮತ್ತೆ ಬಂದು ಬಹಳ ಜನರಿಗೆ ತೊಂದರೆಯನ್ನುಂಟು ಮಾಡಿದೆ. ಬಹುಶಃ ಪತ್ರಿಕೆಯ ವರದಿ ಪ್ರಕಾರ ಬಂಟ್ವಾಳ, ಉಪ್ಪಿನಂಗಡಿ, ಹಾಗೂ ಹೈವೇನಲ್ಲಿದ್ದ ಟೌನ್‌ಗಳಿಗೆಲ್ಲ ನೆರೆ ಬಂದಿದೆ. ಹೀಗೆ ಟೌನ್‌ಗಳಲ್ಲಿ ೮–೧೦ ಅಡಿಯಷ್ಟು ನೀರು ನಿಂತಿದೆ ಎಂದರೆ ಸುಮಾರಾರು ಜನರಿಗೆ ಇದರಿಂದ ಅನಾನುಕೂಲವಾಗಿದೆ. ಬಹಳಷ್ಟು ಮಂದಿ ಮನೆಮಾರು ಗಳನ್ನು ಕಳೆದುಕೊಂಡಿದ್ದಾರೆಂದು ನನಗೆ ತಿಳಿದು ಬಂದಿದೆ. ಪತ್ರಿಕೆಗಳಲ್ಲಿ ನೋಡಿದಾಗ, ಸರ್ಕಾರದವರೂ ಕೂಡ ತಾತ್ಕಾಲಿಕ ಪರಿಹಾರವನ್ನು ನೀಡುವ ಸಲುವಾಗಿ ಮುನ್ನೂರೂವರೆ ಲಕ್ಷ ರೂಪಾಯಿಗಳನ್ನು ಮಂಜೂ ರ್ಮಾಡಿದ್ದಾರೆಂದು ತಿಳಿಯಿತು. ಅಲ್ಲದೆ ಈಗಾಗಲೆ ಒಂದು ಲಕ್ಷ ರೂಪಾಯಿಯನ್ನು ಬಿಡುಗಡೆ ಮಾಡಿದ್ದಾರೆ. ಇದು ಸ್ವಾಗತಾರ್ಹವಾದ ವಿಷಯ. ೧೯೭೪ರಲ್ಲಿ ಘನ ಸರ್ಕಾರದವರು ಮನೆಗಳನ್ನು ಕಟ್ಟಿಕೊಳ್ಳು ವುದಕ್ಕೆ ಧನ ಸಹಾಯವನ್ನು ಮಾಡಿದ್ದರು. ಅದೇ ಪ್ರಕಾರ ಈ ಸಾರಿಯೂ ಕೂಡ ಮನೆ ಮಾರುಗಳನ್ನು ಕಳೆದುಕೊಂಡವರಿಗೆ ಮನೆಗಳನ್ನು ಕಟ್ಟಿಕೊಳ್ಳುವುದಕ್ಕೆ ಧನ ಸಹಾಯವನ್ನು ಸರ್ಕಾರದವರು ಮಾಡಬೇಕೆಂದು ಹೇಳುತ್ತೇನೆ. ಜೊತೆಗೆ ಅಲ್ಲಿನ ಜನರು ಇತರ ಬಾಬುಗಳಲ್ಲೂ ಸಹ ನಷ್ಟಕ್ಕೆ ಒಳಗಾಗಿದ್ದಾರೆ. ೧೯೭೪ರಲ್ಲಿ ನೆರೆ ಬಂದಾಗ ಬೆಳೆಗೆ ತಗುಲಿದ ನಷ್ಟವನ್ನು ಪರಿಹರಿಸಲು ಸರ್ಕಾರ ಹೆಚ್ಚಿನ ಹಣವನ್ನು ಖರ್ಚು ಮಾಡುವು ದಕ್ಕೆ ಸಾಧ್ಯವಾಗಲಿಲ್ಲ. ಆದ್ದರಿಂದ ಈ ಸಾರಿಯಾದರೂ ಸರ್ಕಾರದವರು ವ್ಯವಸಾಯಗಾರರಿಗೆ ಏನೇನು ಅನಾನುಕೂಲತೆಗಳಾಗಿವೆ ಅವನ್ನು ಸರಿಪಡಿಸಲು ಅವರಿಗೆ ಸಂಪೂರ್ಣವಾಗಿ ಸಹಾಯ ಮಾಡಬೇಕೆಂದು

ಹೇಳುತ್ತೇನೆ. ನಮ್ಮಲ್ಲಿ ಪ್ರತಿಯೊಂದು ಕಡೆ ನೀರು ಹೋಗಲಿಕ್ಕೆ ಪ್ರತ್ಯೇಕ ಸ್ಥಳ ಇರುತ್ತದೆ. ಆದರೆ ಓವರ್‌ಫ್ಲೋ ಆದಾಗ ಗದ್ದೆಗಳ ಮೇಲೆಲ್ಲ ನೀರು ಹರಿದು ಗದ್ದೆಗಳೆಲ್ಲ ಹಾಳಾಗುತ್ತವೆಯಲ್ಲದೆ ರೈತರಿಗೆ ಪುನಃ ಕಲ್ಟಿವೇಷನ್ ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಇವತ್ತಿನ ಪರಿಸ್ಥಿತಿ ಅದೇ ರೀತಿ ಆಗಿದೆ. ಆದ್ದರಿಂದ ಅದಕ್ಕೆ ಬೇಕಾದ ಹಣವನ್ನು ಸರ್ಕಾರದವರು ಈ ಸಾರಿ ಪ್ರತ್ಯೇಕವಾಗಿ ಮಂಜೂರ್ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಸೌತ್ ಕೆನರಾದ ಹಳ್ಳಿಗಳ ಕಡೆ ಊರಿಂದೂರಿಗೆ ಹೊಳೆಯ ಮಧ್ಯೆ ಶಿರುಗಾಡಲಿಕ್ಕೆ ಸಣ್ಣ ಸಣ್ಣ ಕೈಸೇತುವೆಗಳನ್ನು ಮಾಡಿರುತ್ತಾರೆ. ಅಂಥ ಕಡೆ ದೊಡ್ಡ ದೊಡ್ಡ ಸೇತುವೆಗಳಿರುವುದಿಲ್ಲ. ಈ ನೆರೆಯ ಪರಿಣಾಮದಿಂದ ಅಂಥ ಸಣ್ಣ ಕೈಸೇತುವೆಗಳೂ ಕೂಡ ಕಾರ್ಕಳ ಬಂಟ್ವಾಳ ಹಾಗೂ ಮಂಗಳೂರಿನ ಅನೇಕ ಕಡೆಗಳಲ್ಲಿ ಕೊಚ್ಚಿಕೊಂಡು ಹೋಗಿವೆ. ಆದ್ದರಿಂದ ಒಂದು ಗ್ರಾಮದಿಂದ ಮತ್ತೊಂದು ಗ್ರಾಮಕ್ಕೆ ಹೋಗಿ ಬರುವುದಕ್ಕೆ ಅವಕಾಶವಿಲ್ಲದೆ ಬಹಳ ತೊಂದರೆಯಾಗಿದೆ. ಆದಕಾರಣ, ಈ ವಿಚಾರವನ್ನು ಕೂಡ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಹಣವನ್ನು ಒದಗಿಸಬೇಕೆಂದು ಹೇಳುತ್ತೇನೆ. ಇನ್ನು ಸಮುದ್ರದ ಕೊರೆತದಿಂದ ಸುರತ್‌ಕಲ್, ಕುಂದಾಪುರ ಮತ್ತು ನಮ್ಮ ಕಡೆಗಳಲ್ಲಿ ಕೆಲವು ಜನರಿಗೆ ತುಂಬ ಅನಾನುಕೂಲವಾಗಿದೆ. ಕಳೆದ ವರ್ಷ ಇದು ಇರಲಿಲ್ಲ. ಕೇರಳದಲ್ಲಿ ಸಮುದ್ರದ ಕೊರೆತವನ್ನು ತಡೆಯುವುದಕ್ಕೆ ಯಾವ ರೀತಿ ಪ್ರೊಟೆಕ್ಷನ್ ಕೊಟ್ಟಿದ್ದರೊ ಅದೇ ರೀತಿ ಸೌತ್ ಕೆನರಾದಲ್ಲೂ ಕೂಡ ಮಾಡದಿದ್ದರೆ ಖಂಡಿತವಾಗಿ ನಮಗೆ ಅನಾನುಕೂಲವಾಗುತ್ತದೆ. ಆದಕಾರಣ ಸರ್ಕಾರ ಇದನ್ನೆಲ್ಲ ಗಮನದಲ್ಲಿಟ್ಟುಕೊಂಡು ಇಂಥ ವಿಷಯಗಳಿಗೆ ಸಹಾಯ ಮತ್ತು ಸಹಕಾರ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ಅಲ್ಲಿಂದ ಒಂದು ಟೆಲಿಗ್ರಾಂ ಕೂಡ ಬಂದಿದೆ, ಅದನ್ನು ತಮ್ಮ ಮೂಲಕ ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಬಿ.ವಿ. ಕಕ್ಕಿಲಾಯ—ಮಾನ್ಯ ಸ್ನೇಹಿತರು ಒಂದು ವಿಚಾರ ಹೇಳುವುದನ್ನು ಬಿಟ್ಟರು. ಅದೇನೆಂದರೆ, ವಿಪರೀತ ಮಳೆ ಬಂದು ಸಾರಿಗೆ ವ್ಯವಸ್ಥೆ ನಿಂತುಹೋಗಿರುವುದರಿಂದ ನಿನ್ನೆ ಮತ್ತು ಮೊನ್ನೆ ಮೆಡಿಕಲ್ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಇದ್ದಂತಹ ಇಂಟರ್‌ವ್ಯೂಗೆ ಬರಲಿಕ್ಕೆ ವಿದ್ಯಾರ್ಥಿಗಳಿಗೆ ಸಾಧ್ಯವಾಗಲಿಲ್ಲ. ಆದ್ದರಿಂದ ಸರ್ಕಾರದವರು ದಯವಿಟ್ಟು ಆ ವಿದ್ಯಾರ್ಥಿಗಳಿಗೆ ಇನ್ನೊಂದು ದಿವಸವನ್ನು ಗೊತ್ತು ಮಾಡಿ ಇಂಟರ್‌ವ್ಯೂವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಬಗ್ಗೆ ನಾನಂ ಆಗಲೇ ಮಾನ್ಯ ಆರೋಗ್ಯ ಸಚಿವರಿಗೆ ತಿಳಿಸಿದ್ದೇನೆ. ಅವರು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಇನ್ನು ಅಲ್ಲಿ ಕೂಡಲೇ ಮಾಡಬೇಕಾದ ಮುಖ್ಯವಾದ ಕೆಲಸವೇನೆಂದರೆ, ನೆರೆ ಬಂದ ಸ್ಥಳಗಳಲ್ಲಿ ಮನೆಮಾರುಗಳನ್ನು ಬಿಟ್ಟು ಹೋಗಿರತಕ್ಕ ಜನರೆಲ್ಲರಿಗೂ ಕಳೆದ ಸಲ ಮಾಡಿದ ಹಾಗೆ ಶಾಲೆಗಳಲ್ಲಿ ಮತ್ತು ಸಾರ್ವಜನಿಕ ಕಟ್ಟಡಗಳಲ್ಲಿ ನೆರೆ ಇಳಿಯುವ ತನಕ ತಾತ್ಕಾಲಿಕವಾಗಿ ಊಟ ಮತ್ತು ವಸತಿಯ ವ್ಯವಸ್ಥೆಯನ್ನು ಮಾಡುವ ಕಡೆ ಸರ್ಕಾರದವರು ಗಮನ ಹರಿಸಬೇಕಾಗಿದೆ. ಇದೇ ಪ್ರಕಾರ ರಸ್ತೆಗಳು ಕೂಡ ನೆರೆಯ ಪರಿಣಾಮದಿಂದ ಹಾಳಾಗಿವೆ, ಅವುಗಳ ರಿಪೇರಿಗೆ ಕೂಡ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ ಎ. ಮೊಹಿದ್ದೀನ್:—ಸ್ವಾಮಿ, ನಮ್ಮ ಬಂಟ್ವಾಳ ಟೌನ್ ಏನಿದೆ, ಇದಕ್ಕೆ ಶಾಶ್ವತವಾದ ನೆರೆ ಪರಿಹಾರ ಕ್ರಮವನ್ನು ಕೈಗೊಳ್ಳಬೇಕಾಗಿದೆ. ಏಕೆಂದರೆ, ಅಲ್ಲಿನ ಸುಮಾರು ೨೦ ಸಾವಿರ ಜನರಿಗೆ ಮಳೆ ಗಾಲದಲ್ಲಿ ಯಾವ ಗಳಿಗೆಯಲ್ಲಿ ನೆರೆ ಬಂದು ಬಿಡುತ್ತದೋ ಎಂದು ನಿದ್ರೆ ಮಾಡುವುದಿಲ್ಲ. ಇದು ಪ್ರತೀ ಸಾರಿ ನೆರೆ ಬರುತ್ತಿರುವುದು. ಆದಕಾರಣ ನ್ಯಾಷನಲ್ ಹೈವೇನಲ್ಲಿರತಕ್ಕ ಪ್ರದೇಶಗಳಲ್ಲೆಲ್ಲಾ ಒಂದು ಶಾಶ್ವತವಾದ ಪರಿಹಾರಕ್ರಮವನ್ನು ಕೈಗೊಳ್ಳಬೇಕಾಗಿದೆ. ಇದನ್ನೆಲ್ಲ ಸರ್ಕಾರದವರು ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಎಂ. ಶೀರ್ನಳ್ಳಿ ಚಂದ್ರಶೇಖರ್.—ಸ್ವಾಮಿ, ಶಿವಮೊಗ್ಗ ಜಿಲ್ಲೆಯಲ್ಲಿ ೧೯೨೪ನೇ ಇಸವಿಯಿಂದೀಚೆಗೆ ಇಂಥ ಮಳೆ ಆಗಿರಲಿಲ್ಲ. ಈ ಮಳೆಯಿಂದಾಗಿ ಬಹುತೇಕ ಮಲೆನಾಡಿನ ತಾಲ್ಲೂಕುಗಳೆಲ್ಲವೂ ಹಾನಿಗೀಡಾಗಿರುವುದಲ್ಲದೆ, ಅಲ್ಲಿನ ಅಭಿವೃದ್ಧಿ ಕಾರ್ಯಕ್ರಮಗಳೆಲ್ಲವು ಸ್ಥಗಿತವಾಗಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ತೀರ್ಥಹಳ್ಳಿ, ಹೊಸನಗರ, ಸಾಗರ, ಶಿವಮೊಗ್ಗ ತಾಲ್ಲೂಕುಗಳಲ್ಲಿ ನೆಟ್ಟಂಥ ಗಿಡಗಳಲ್ಲದೆ ಗದ್ದೆಗಳೆಲ್ಲಾ ನೀರಿನಲ್ಲಿ ಮುಳುಗಿ ಹೋಗಿದೆ. ಹೀಗಾದರೆ ರೈತರ ಗತಿ ಏನು? ಸಾವಿರಾರು ರೂಪಾಯಿ ಸಾಲಗಳನ್ನು ಮಾಡಿ ಗಿಡಗಳನ್ನು ನೆಟ್ಟಿರುತ್ತಾರೆ, ಅಂಥವರ ಗತಿ ಏನು? ಶಿವಮೊಗ್ಗದಿಂದ ಆಗುಂಬೆಗೆ ಹೋಗತಕ್ಕ ರಸ್ತೆ ಏನಿದೆ ಅದರ ಸಂಪರ್ಕ ಇಲ್ಲದಂತಾಗಿದೆ. ನೀರಿನಲ್ಲಿ ಮುಳುಗಿ ದುರಸ್ತಿಗೆ ಈಡಾಗಿರತಕ್ಕ ತಾಲ್ಲೂಕುಗಳೇನಿವೆ ಅಂತಹಕಡೆಗಳಿಗೆ ನೇರವಾಗಿ ಗಮನ ಕೊಟ್ಟು ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ. ಅಮೇಲೆ ನಮ್ಮ ತಾಲ್ಲೂಕಿನಲ್ಲಿ ಹರಿಜನ ಮಿತ್ರರೊಬ್ಬರಿಗೆ ಪ್ರೊಮೋಷನ್ ಸಿಗದೆ ಸ್ಥಗಿತವಾಗಿದೆ ಎಂದು...,

ಅಧ್ಯಕ್ಷರು :—ನಾನು ಅದನ್ನೆಲ್ಲಾ ಹೇಳುವುದಕ್ಕೆ ಅನುಮತಿ ಕೊಡುವುದಿಲ್ಲ. ಯಾವುದೋ ಬೇರೆ ವಿಷಯದ ಕಡೆಗೆ ತಾವು ಹೋಗುತ್ತಿದ್ದೀರಿ. ೫ ವರ್ಷದಿಂದ ಇಲ್ಲಿ ಶಾಸಕರಾಗಿದ್ದು ನಿಮಗೆ ಅಷ್ಟೂ ತಿಳಿಯುವುದಿಲ್ಲವೇ? ನೋಟೀಸ್ ಕೊಡದೇ ಮಾತನಾಡಬಾರದು ಎಂಬುದು ನಿಮಗೆ ಗೊತ್ತಿಲ್ಲವೇ? ಯಾತಕ್ಕೆ ಈ ರೀತಿ ನನಗೆ ಹಿಂಸೆ ಕೊಡುತ್ತಿದ್ದಿರಿ?

ಶ್ರೀ ವಿ.ಎಂ. ಘಾಡಿ :—ಸ್ವಾಮಿ ಹೊನ್ನಾವರ ತಾಲ್ಲೂಕಿನಲ್ಲಿ ಕಳೆದ ೧೬ನೇ ತಾರೀಖು ಎರಡು ತಾಸಿನಲ್ಲಿ ೬ ಇಂಚು ಮಳೆ ಬಿದ್ದು ಬಹಳ ಅನಾಹುತವಾಗಿದೆ. ಗದ್ದೆಗಳು, ಮನೆಗಳು ಎಲ್ಲಾ ಹಾಳಾಗಿ ಹೋಗಿವೆ. ವರ್ಷೇ ವರ್ಷೇ ಅಲ್ಲಿ ಹೀಗಾಗುತ್ತಿದೆ. ಸಮುದ್ರದ ದಂಡೆಗೆಳು ಕೊಚ್ಚಿಕೊಂಡುಹೋಗದಂತೆ ಶಾಶ್ವತವಾದ ಪರಿಹಾರವನ್ನು ಕೇರಳದಲ್ಲಿ ಯಾವರೀತಿ ಮಾಡಿದ್ದಾರೆ ಅದೇ ಪ್ರಕಾರ ಇಲ್ಲೂ ಮಾಡ ಬೇಕು. ಇಲ್ಲಿ ದಕ್ಷಿಣ ಕನ್ನಡ ಜಿಲ್ಲೆಗಿಂತ ಹೆಚ್ಚು ಅನಾಹುತವಾಗಿದೆ. ಸುಮಾರು ೫೦ ಲಕ್ಷ ರೂಪಾಯಿ ನಷ್ಟು ಅನಾಹುತ ವಾಗಿದೆ. ಆದ್ದರಿಂದ ಕೂಡಲೇ ಸರ್ಕಾದವರು ಗಮನಕೊಟ್ಟು ಜನಗಳಿಗೆ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಮತ್ತು ಶಾಶ್ವತ ಪರಿಹಾರ ಕಾರ್ಯಕ್ರಮಗಳನ್ನು ಹಾಕಿಕೊಳ್ಳ ಬೇಕು ಎಂದು ಕೇಳಿಕೊಳ್ಳುತ್ತೇನೆ. ಮತ್ತೆ ಇನ್ನೊಂದು ವಿಷಯ ಏನೆಂದರೆ, ಕೆಲವರು ದೀನದಲಿತರ ಭೂಮಿಯ ಮೇಲೆ ಅತಿಕ್ರಮಣಮಾಡಿ ಮತ್ತೆ ಅವರನ್ನೆ ೨ ದಿವಸ ಸಿರಸಿ ಜೈಲಿನಲ್ಲಿ ಊಟ ತಿಂಡಿ ಕೊಡದೇ ಇಟ್ಟದ್ದರು. ದೀನದಲಿತರಿಗೆ ಭೂಮಿಯನ್ನು ರೆಗ್ಯುಲರೈಸ್ ಮಾಡಬೇಕೆಂದು ಸರ್ಕಾರದ ಹುಕುಂ ಇದ್ದರೂ ಕೂಡ ಅವರಿಗೆ ತೊಂದರೆ ಕೊಡುತ್ತಿದ್ದಾರೆ ಸರ್ಕಾರದವರು ಈ ತರಹ ತೊಂದರೆಗಳಾಗದಂತೆ ನೋಡಿಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ರಾಮಭಟ್.—ಸ್ವಾಮಿ, ಈ ವಿಷಯದಲ್ಲಿ ಉಪ್ಪಿನಂಗಡಿಯನ್ನು ಬಿಡುವುದು ಬೇಡ ಎಂದೂ ಕೇಳಿಕೊಳ್ಳುತ್ತೇನೆ.

† SRI D. DEVARAJ URS (Chief Minister).—Sir, I want to assure the hon. members of one thing; whether it is Uppinangadi, Bantwal Haliyal, Shimoga or any other place, if there are flood damages, the Revenue Minister has already given instructions to the Deputy Commissioners concerned to immediately give help, aid and other needs, There are certain things which have to be attended to at once and certain things after this is over. About the point raised by my friend Sri Kakkilaya about people who are really in great distress in the sense that their houses have been damaged and taken away by floods. the Government is not new to facing this type of problems. Even in the year 1974 there was collasal damage, much more than what we have been talking of now. The construction of half-damaged, fully-damaged and partly damaged houses was taken up because those houses were likely to be damaged in future time. Further, we also said that if they were to come within the flood area they have to be shifted to safer places. We have constructed 4,600 houses and people were happy. Perhaps as a result of the action we took, this time even though the floods may not be to that level, unfortunately the damage may be there and I presume it is not going to be so much as it was once. Here and there there may be some damages. Certainly, the Government will consider all aspects and take action to see that people who are in difficulty are given all possible help to get over those difficulties both now and in the future.